

ದುಃಖ ಮತ್ತು ದುಃಖನಿವೃತ್ತಿಯ ಉಪಾಯ

ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ** ಅನುವಾದ : **ಮಾತಾ ತ್ಯಾಗಮಯೀ**

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬೌದ್ಧಮತ :

ಭಗವಾನ್ ಬುದ್ಧನ ಉಪದೇಶವು ದುಃಖದ ಸತ್ಯತೆ ಮತ್ತು ಅದರಿಂದ ಪಾರಾಗುವ ಉಪಾಯವನ್ನು ಆಧರಿಸಿದೆ. ಅವನ ಪ್ರಕಾರ ರೋಗ, ಜರೆ, ಮೃತ್ಯು — ಇವೆಲ್ಲವೂ ದುಃಖ. ಈ ದುಃಖಕ್ಕೆ ಕಾರಣವನ್ನು ಹುಡುಕುತ್ತ ಅವನು ಕಾರ್ಯ–ಕಾರಣ ನಿಯಮದ ಸರಪಳಿಯನ್ನೇ ಹುಡುಕಿ ತೆಗೆದನು. ಅದನ್ನು ''ಪ್ರತೀತ್ಯ ಸಮುತ್ಪಾದ'' ಎಂದು ಕರೆಯಲಾಗಿದೆ. ವಾಸನೆ ಅಥವಾ ತೃಷ್ಣೆಯೇ ದುಃಖಕ್ಕೆ ಕಾರಣ. ಅದರ ಮೂಲದಲ್ಲಿದೆ ಅಜ್ಞಾನ. ದುಃಖದಿಂದ ಪಾರಾಗಲು ಅಷ್ಟಾಂಗಮಾರ್ಗ ಎಂಬ ಸ್ಪಷ್ಟವಾದ ಸಾಧನಾಪಥವನ್ನು ಬುದ್ಧನು ಹೇಳಿರುವನು.

ಸ್ಟೋಯಿಸಿಸಂ :

ಸ್ಟೋಯಿಸಿಸಂ ಎಂಬ ಒಂದು ಆಶಾವಾದಿ ದಾರ್ಶನಿಕ ಮತವು ದುಃಖವನ್ನು ಕೆಡುಕು ಎಂದು ಒಪ್ಪುವುದಿಲ್ಲ. ಬದಲಾಗಿ ದುಃಖವನ್ನು ಹಗುರವಾಗಿ ತೆಗೆದುಕೊಂಡು, ಅವಿಚಲಿತರಾಗಿರುವಂತೆ ಕರೆ ನೀಡುತ್ತವೆ. ಅವರ ಪ್ರಕಾರ ಜಗತ್ತು ಶುಭವಾದುದು, ಪೂರ್ಣ ವಾದುದು. ಯಾವುದನ್ನು ನಾವು ದುಃಖ, ಅಶುಭ, ಕೆಡುಕು ಎಂದು ಹೇಳುತ್ತೇವೆಯೋ ಅದು ಕೇವಲ ಸಾಪೇಕ್ಷ ದೃಷ್ಟಿಯಿಂದ ಮಾತ್ರ ಕೆಡುಕು. ಚಿತ್ರದಲ್ಲಿ ಬಿಡಿಸಲ್ಪಟ್ಟ ನೆರಳು ಆ ಚಿತ್ರದ ಸೌಂದರ್ಯವನ್ನು ವೃದ್ಧಿಸುವಂತೆ ದುಃಖವೂ ಜೀವನ ಚಿತ್ರದ ಸೌಂದರ್ಯವನ್ನು ವರ್ಧಿಸುತ್ತದೆ. ವಿಶಾಲವಾದ ಅರ್ಥದಲ್ಲಿ ಜಗತ್ತು ಸುಂದರವೇ ಆಗಿದೆ. ಅಲ್ಲಿ ಪ್ರತಿಯೊಂದು ಸುಖ–ದುಃಖಕ್ಕೂ ಅದರದೇ ಆದ ಪಾತ್ರವಿದೆ. ಆದ್ದರಿಂದ ಯಾವುದೂ ಕೆಡುಕಲ್ಲ, ಅಶುಭವಲ್ಲ. ದುಃಖವು ಪ್ರಾಕೃತಿಕ ಕ್ರಿಯೆಗಳ ಅನಿವಾರ್ಯ ಪರಿಣಾಮವಾಗಿದೆ. ಅಮೃತವನ್ನು ಪಡೆಯುವ ಪ್ರಕ್ರಿಯೆಯಲ್ಲಿ ಮೊದಲು ವಿಷ ಹೊರಬಂದಂತೆ ಒಳಿತನ್ನು ಸಾಧಿಸುವ ಹಾದಿಯಲ್ಲಿ ಕೆಡುಕು ಅನಿವಾರ್ಯವಾಗಿ ಬರುತ್ತದೆ. ದುಃಖ ತಾನಾಗಿಯೇ ಕೆಟ್ಟದೂ ಅಲ್ಲ. ಏಕೆಂದರೆ ಚಾರಿತ್ರ್ಯದೊಂದಿಗೆ, ಜೀವನ ಮೌಲ್ಯಗಳೊಂದಿಗೆ ಅದಕ್ಕೆ ಏನೂ ಸಂಬಂಧವಿಲ್ಲ. ಮಾತ್ರವಲ್ಲ ಅದು ಸದ್ಗುಣಗಳನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ. ಏಕೆಂದರೆ ಕಷ್ಟ, ದುರ್ಗುಣ ಮತ್ತು ದುಃಖವನ್ನು ದೂರ ಮಾಡಿದಾಗಲೇ ಸದ್ಗುಣಗಳು ಬೆಳಕಿಗೆ ಬರುವುವು. ಆದ್ದರಿಂದ ವಿವೇಕಪೂರ್ಣ, ಸದಾಚಾರದ ಜೀವನ ದಲ್ಲಿಯೇ ದುಃಖ ನಿವೃತ್ತಿ ಮತ್ತು ಸುಖಪ್ರಾಪ್ತಿಯ ಗುಟ್ಟು ಅಡಗಿದೆ. ನಾವು ಪ್ರಕೃತಿ ನಿಯಮಾನುಸಾರ ಬದುಕಲೆತ್ನಿಸಬೇಕು.

ಕ್ರೈಸ್ತ ಧರ್ಮದ ಪ್ರವರ್ತಕ ಏಸುಕ್ರಿಸ್ತನ ಜೀವನವು ದುಃಖ ಮತ್ತು ಹೋರಾಟದಿಂದ ತುಂಬಿದೆ. ಅವನ ಅಂತ್ಯವೂ ನೋವಿನಲ್ಲೇ ಆಯಿತು. ಅವನ ಜೀವನ ಸಂದೇಶಗಳನ್ನು ಆಧರಿಸಿ ಅನೇಕ ಮತ–ಸಿದ್ಧಾಂತಗಳು ಉದಯಿಸಿದವು.

೧) ಕ್ರಿಸ್ತನಿಗೆ ದುಃಖ ಚೆನ್ನಾಗಿ ಗೊತ್ತಿತ್ತು. ಅದನ್ನು ಅವನು ದರ್ಶನ ಅಥವಾ ಸಿದ್ಧಾಂತದ ರೂಪದಲ್ಲಿ ವಿವರಿಸಲು ಹೋಗಲಿಲ್ಲ. ಬದಲಾಗಿ ಮಾನವತೆಯ ಮೇಲಿನ ಪರಮ ಅನುಕಂಪೆಯಿಂದ ಅವರ ದುಃಖವನ್ನು ದೂರಮಾಡಲು ಪ್ರಯತ್ನಿಸಿದನು. ಅವನು ಪ್ರೇಮ, ಕರುಣೆ, ಸಹಾನುಭೂತಿ ಮತ್ತು ತ್ಯಾಗದಿಂದ ಜನರ ನೋವು–ದುಃಖಗಳನ್ನು ಪರಿಹರಿಸಲು ಪರಿಶ್ರಮಿಸಿದನು. ಅವರ ಈ ಹೋರಾಟದಲ್ಲಿ ಕ್ರಿಸ್ತನು ಸಹಾಯಕನಾಗಿದ್ದನು.

ಆದರೆ ಜನರೂ ಅವನೊಂದಿಗೆ ಕೈ ಜೋಡಿಸಬೇಕೆಂದು ಅವನ ಅಪೇಕ್ಷೆಯಾಗಿತ್ತು. ಅವನು ತಾನೊಬ್ಬನೇ ಕೆಡುಕಿನ ವಿರುದ್ಧ ಸೆಣಸುವುದಿಲ್ಲ. ಅವನ ಸ್ಪರ್ಶದಿಂದ ರೋಗಮುಕ್ತರಾದವರು, ದುಃಖವಿಮುಕ್ತರಾದವರು ಗುರಿಯತ್ತ ಹೆಜ್ಜೆಯಿಡುವಂತಾಯಿತು.

೨) ಕ್ರಿಸ್ತನು ಭಗವಂತನಲ್ಲಿ ಒಂದಾಗಿ ಭಗವತ್‌ಪದದಲ್ಲಿ ಪ್ರತಿಷ್ಠಿತನಾಗಿ, ಜೀವನದ ಸಮಸ್ಯೆಗಳನ್ನು ಪರಿಹರಿಸಿದನು. ನಾವೂ ಅಂತೆಯೇ ಭಗವಂತನಲ್ಲಿ ನೆಲಸಿ ದುಃಖಗಳಿಂದ ಪಾರಾಗಬೇಕು.

೩) Imitation of Christ ಅಥವಾ 'ಕ್ರಿಸ್ತನ ಅನುಸರಣೆ' ಎಂಬ ಪುಸ್ತಕದಲ್ಲೂ ಕ್ರಿಸ್ತನ ಜೀವನದ ದುಃಖವನ್ನು ದೃಷ್ಟಾಂತವಾಗಿ ನೀಡುತ್ತ ಕಷ್ಟ-ದುಃಖಗಳನ್ನು ಸ್ವಪ್ರೀತಿಯಿಂದ ಸ್ವೀಕರಿಸಬೇಕು ಎಂದು ಹೇಳಲಾಗಿದೆ. ಕ್ರಿಸ್ತನನ್ನು ಪ್ರೀತಿಸುವವನಿಗೆ ಕಷ್ಟ ಪ್ರಿಯವಾಗಬೇಕು. ಏಕೆಂದರೆ ಕ್ರಿಸ್ತನೇ ಅವನ್ನು ಸಹಿಸಿದ್ದಾನೆ. ಆ ಕಷ್ಟಗಳಲ್ಲೇ ಸುಖ, ಮುಕ್ತಿ ಮತ್ತು ಜೀವನದ ರಸ ಇದೆ. ಕಷ್ಟಸಹಿಷ್ಣುತೆಯಿಂದ ನಾವು ನಮ್ಮ ಭಗವಂತನಂತೆ ಆಗುತ್ತೇವೆ.

೪) ಕ್ರೈಸ್ತ ಧರ್ಮದ ಪ್ರಕಾರ ಪಾಪ ದುಃಖಕ್ಕೆ ಕಾರಣ. ಭಗವಂತನಿಂದ ವಿಮುಖನಾಗಿರುವುದನ್ನು Original Sin ಅಥವಾ ಆದಿಪಾಪ ಎಂದು ಕರೆಯಲಾಗಿದೆ. ದುಃಖ ಒಂದು ದಂಡದ ವಿಧಾನ. ಅದು ನಮ್ಮ ಒಳಿತಿಗಾಗಿಯೇ. ಆದ್ದರಿಂದ ಅದನ್ನು ಕೆಡುಕೆಂದು ಬಗೆಯದಿರಿ. ಭಗವಂತನಲ್ಲಿ ಒಂದಾಗಿರಿ. ಆಗ ಎಲ್ಲವೂ ಸರಿಹೋಗುತ್ತದೆ. ದುಃಖಗಳಿಂದ ತಲ್ಲಣಿಸದಿರಿ. ಏಕೆಂದರೆ ದುಃಖ ದಲ್ಲಿ ಕ್ರಿಸ್ತ ನಿಮ್ಮೊಡನಿದ್ದಾನೆ. ಅವನು ಸದಾ ನೀವು ಕಷ್ಟಸಹಿಷ್ಣುಗಳಾಗುವಂತೆ ನಿಮ್ಮೊಡನಿರುತ್ತಾನೆ.

ಭಾರತೀಯ ದರ್ಶನದ ಮಾರ್ಗದರ್ಶನ

ಅನಾದಿ ಕಾಲದಿಂದ ಭಾರತದಲ್ಲೂ ಮನೀಷಿಗಳು ದುಃಖವನ್ನು ಕುರಿತಂತೆ ಗಾಢವಾಗಿ ಚಿಂತನೆಯನ್ನು ಮಾಡಿದ್ದಾರೆ. ಭಾರತದ ದರ್ಶನವನ್ನು ಸಾಮಾನ್ಯವಾಗಿ ನಿರಾಶಾವಾದಿ ಎಂದು ಪರಿಗಣಿಸಲಾಗಿದೆ. ಏಕೆಂದರೆ ಅದು ಜಗತ್ತನ್ನು ದುಃಖಮಯ ಅವಿದ್ಯೆಯಿಂದ ಜನಿಸಿದ ಬಂಧನ ಎಂದು ಬಗೆಯುತ್ತದೆ. ಇದು ಭಾರತೀಯ ಚಿಂತನೆಯ ಮೂಲವಾದರೂ ಅದಕ್ಕೊಂದು ಆಶಾವಾದಿ ಸಕಾರಾತ್ಮಕ ಮುಖವೂ ಇದೆ. ವ್ಯಕ್ತಿಯು ಜೀವನದಲ್ಲಿ ಎಚ್ಚರಗೇಡಿಯಾಗಿ, ಪ್ರಮಾದವಶನಾಗಿ ಇರುತ್ತಾನೆ ಮತ್ತು ಅವನು ತನ್ನ ಅಸಂಖ್ಯ ವಾಸನೆಗಳ ಬಿಗಿಮುಷ್ಟಿಯಲ್ಲಿ ಕೈಗೊಂಬೆಯಂತಾಗಿರುವುದರಿಂದ ಮತ್ತೆ ಮತ್ತೆ ದುಃಖವಶನಾಗುತ್ತಿರುತ್ತಾನೆ. ಭಾರತದ ಋಷಿಗಳು ದುಃಖದ ಕಾರಣವನ್ನು ಹೀಗೆ ವಿವರಿಸಿದ್ದಾರೆ:

ಭಾರತದ ದಾರ್ಶನಿಕರು ಒಂದು ಶಾಶ್ವತವಾದ ನೈತಿಕ ನಿಯಮವನ್ನು ನಂಬುತ್ತಾರೆ. ಅದನ್ನು ಋತ ಎಂದು ಕರೆಯಲಾಗಿದೆ. ಅದನ್ನೇ ಮೀಮಾಂಸಕರು ಅಪೂರ್ವ ಎಂದು, ನೈಯಾಯಿಕರು ಅದೃಷ್ಟ ಎಂದು, ವೇದಾಂತಿಗಳು ಕರ್ಮ ಎಂದು ಕರೆಯುತ್ತಾರೆ. ಮನುಷ್ಯನು ತನ್ನ ಶುಭ ಅಥವಾ ಅಶುಭ ಕರ್ಮಗಳ ಫಲವಾಗಿ ಸುಖ ಅಥವಾ ದುಃಖವನ್ನು ಅನುಭವಿಸುತ್ತಾನೆ. ಭಾರತದಲ್ಲೂ ಜಡವಾದಿ ಚಾರ್ವಾಕರು ಇದ್ದರು. ಅವರು ಜೀವನದ ದುಃಖಗಳನ್ನು ಉಪೇಕ್ಷಿಸಿ ಸುಖವನ್ನೇ ಅನುಭವಿಸಬಯಸುತ್ತಿದ್ದರು. ಮೀಮಾಂಸಕರ ಮತದಂತೆ, ಈ ಜನ್ಮದಲ್ಲಿ ಸತ್ಕರ್ಮವನ್ನು ಮಾಡಿದರೆ ಮುಂದೆ ಸ್ವರ್ಗಸುಖ ಸಿಗುತ್ತದೆ. ಪತಂಜಲಿ ಯೋಗಸೂತ್ರದ ಪ್ರಕಾರ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಮತ್ತು ಅಭಿನಿವೇಶ ಎಂಬ ಐದು ಕ್ಲೇಶಗಳೇ ದುಃಖಕ್ಕೆ ಕಾರಣ.

ಯೋಗಿಗಳ ಪ್ರಕಾರ ದುಃಖ ಮೂರು ಬಗೆಯದಾಗಿರುತ್ತದೆ. ಗತ (ಭೂತಕಾಲದ) ದುಃಖ, ಆಗತ (ವರ್ತಮಾನದ) ದುಃಖ ಮತ್ತು ಅನಾಗತ, ಆಗಾಮಿ (ಭವಿಷ್ಯತ್) ದುಃಖ. ಜನ ಈ ಮೂರು ದುಃಖಗಳಿಂದಲೂ ಒದ್ದಾಡುತ್ತಾರೆ. ಆದರೆ ಯೋಗಿಗಳು ಹೇಳುತ್ತಾರೆ, ವರ್ತಮಾನದ ದುಃಖವನ್ನಂತೂ ಅನುಭವಿಸಲೇ ಬೇಕು. ಆದರೆ ಅನಾಗತ ಅಥವಾ ಆಗಾಮಿ ದುಃಖವನ್ನು ನಾಶ ಮಾಡಬಹುದು. ಹೇಗೆ? **'ಹೇಯಂ ದುಃಖಂ ಅನಾಗತಮ್'** — ಅದನ್ನು ದೂರ ಮಾಡುವ ಉಪಾಯ ಅಷ್ಟಾಂಗಯೋಗ.

ಗೀತೆಯಲ್ಲಿ ದುಃಖದ ಸಮಸ್ಯೆಯನ್ನು ವಿಶದವಾಗಿ ವಿವೇಚಿಸಲಾಗಿದೆ. ಶ್ರೀಕೃಷ್ಣ ಸುಖದುಃಖದಲ್ಲಿ ಸಮಬುದ್ಧಿಯನ್ನು ಅಭ್ಯಸಿಸುವಂತೆ ಆದೇಶಿಸುತ್ತಾನೆ. ಸಮತ್ವವನ್ನು ಸಾಧಿಸಲು ಅವನು ಅರುಹಿದ ಉಪಾಯಗಳು — ಅಹಂಕಾರ ತ್ಯಾಗ, ಕರ್ತೃತ್ವ ಭೋಕ್ತೃತ್ವದ ತ್ಯಾಗ. ಕರ್ಮ ಮಾಡು, ಆದರೆ ಫಲಾಪೇಕ್ಷೆಯನ್ನು ಬಿಡು, ಅನಾಸಕ್ತಿಯನ್ನು ಕಲಿತುಕೋ ಇತ್ಯಾದಿ. ಗೀತೆಯಲ್ಲಿ ದುಃಖವನ್ನು ಸುಖಕ್ಕಿಂತ ಬೇರೆಯಾಗಿ ನೋಡಲಾಗಿಲ್ಲ. ಕೇವಲ ದುಃಖದಿಂದ ಪಾರಾಗುವುದಲ್ಲ, ಸುಖ-ದುಃಖವೆರಡನ್ನೂ ಮೀರಿ ಬೆಳೆಯುವ ಕರೆಯನ್ನು ಶ್ರೀಕೃಷ್ಣನು ನೀಡಿದ್ದಾನೆ.

ಭಕ್ತಿಶಾಸ್ತ್ರಗಳಲ್ಲಿ ಇದೇ ವಿಚಾರವನ್ನು ಇನ್ನೊಂದು ದೃಷ್ಟಿಯಿಂದ ಹೇಳಲಾಗಿದೆ. ಭಕ್ತ ತನ್ನ ಸುಖದುಃಖವೆರಡನ್ನೂ ಭಗವಂತನ ಇಚ್ಛೆ ಎಂದು ಬಗೆಯುತ್ತಾನೆ. ಆದ್ದರಿಂದ ಅವನು ಎರಡನ್ನೂ ಭಗವಂತನ ಕೃಪೆ ಎಂದು ಸಂತೋಷದಿಂದ ಸ್ವೀಕರಿಸುತ್ತಾನೆ. ಮಗುವಿಗೆ ಹಾಲುಣಿಸುವ ತಾಯಿ ಎರಡು ಏಟನ್ನೂ ಕೊಡುತ್ತಾಳೆ. ಆದ್ದರಿಂದ ಭಕ್ತನು ಯಾವುದೇ ವಸ್ತು, ವ್ಯಕ್ತಿ, ಘಟನೆಯನ್ನು ನೋಡುವುದಿಲ್ಲ. ಬದಲಾಗಿ ಎಲ್ಲದರಲ್ಲಿ ತನ್ನ ಪ್ರಿಯತಮ ಪ್ರಭುವನ್ನು ಕಾಣುತ್ತಾನೆ. ಆ ಮಹಾಪ್ರೇಮವು ದುಃಖವನ್ನು ಸಹಿಸುವ ಅದ್ಭುತ ಶಕ್ತಿಯನ್ನು ನೀಡುತ್ತದೆ. ಒಬ್ಬ ತಾಯಿ ಮಗುವಿಗಾಗಿ ಎಷ್ಟೊಂದು ದುಃಖ-ಕಷ್ಟಗಳನ್ನು ಸಹಿಸುತ್ತಾಳೆ. ಅವು ಅವಳಿಗೆ ಕಷ್ಟವೆನ್ನಿಸುವುದೂ ಇಲ್ಲ. ಅದೇ ರೀತಿ ಭಕ್ತನಿಗೂ ತನ್ನ ಪ್ರಿಯತಮನಿಗಾಗಿ ಕಷ್ಟಗಳನ್ನು ಸಹಿಸುವಲ್ಲಿ ಆನಂದವಿದೆ.

ಉಪನಿಷತ್ತಿನಲ್ಲೂ ದುಃಖದ ಸಮಸ್ಯೆಯನ್ನು ಹಲವು ಕಡೆ ವಿಶ್ಲೇಷಿಸಲಾಗಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದರು ಸನತ್ಕುಮಾರರನ್ನು ಸಮೀಪಿಸಿ ದುಃಖನಿವೃತ್ತಿಯ ಉಪಾಯವನ್ನು

ಕೇಳುತ್ತಾನೆ. ಮೈತ್ರೇಯಿಯೂ ಯಾಜ್ಞವಲ್ಕ್ಯರು ಸಂನ್ಯಾಸಕ್ಕೆ ಹೊರಡಲಿದ್ದಾಗ ತತ್ತ್ವವಿಚಾರವಾಗಿ ಜಿಜ್ಞಾಸೆಯನ್ನು ಮಾಡುತ್ತಾಳೆ. ಉಪನಿಷತ್ತು ಸುಸ್ಪಷ್ಟವಾಗಿ ಘೋಷಿಸುತ್ತದೆ: '**ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ ದ್ವಿತೀಯಾದ್ವೈ ಭಯಂ ಭವತಿ**' — ಭೂಮದಲ್ಲಿ ಸುಖವಿದೆ, ಅಲ್ಪದಲ್ಲಿ ಸುಖವಿಲ್ಲ, ದ್ವೈತದಲ್ಲಿ , ಎರಡು ಇರುವಲ್ಲಿ — ದುಃಖವಿದೆ. ಹೀಗೆ ಉಪನಿಷತ್ತಿನಲ್ಲಿ ಏಕತ್ವದರ್ಶನ ಮತ್ತು ಅದ್ವೈತಭಾವದಲ್ಲಿ ಸಂಸ್ಥಿತರಾಗುವುದೇ ದುಃಖನಿವೃತ್ತಿಯ ಉಪಾಯ ಎಂದು ಹೇಳಲಾಗಿದೆ.

ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥

ಈಶಾವಾಸ್ಯ , ೭.

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಂ
ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ
ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥

ಕಠೋಪನಿಷತ್, ೫.೧೩

'ಜ್ಞಾನನೇತ್ರದಿಂದ ಆತ್ಮವನ್ನು ಎಲ್ಲಡೆ ದರ್ಶಿಸುವವನಿಗೆ ಶೋಕ, ಮೋಹ ಇರುವುದಿಲ್ಲ. ನಾಶವಾಗುವ ಅನಿತ್ಯ ವಸ್ತುಗಳ ನಡುವೆ ಅವಿನಾಶಿ ಆತ್ಮವನ್ನು ದರ್ಶಿಸುವವನು ಶಾಶ್ವತ ಸುಖ-ಶಾಂತಿಯನ್ನು ಪಡೆಯುತ್ತಾನೆ, ಇತರರಲ್ಲ.' ಎಲ್ಲ ಶಾಸ್ತ್ರಗಳೂ ಸುಖಿಗಳಾಗಲು ವಾಸನಾ ತ್ಯಾಗ, ಕಾಮನೆಗಳ ತ್ಯಾಗ ಮತ್ತು ಆಸಕ್ತಿಯ ತ್ಯಾಗವನ್ನು ಹೇಳಿವೆ.

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ ॥

(ಗೀತೆ, ೨.೭೧)

ತನ್ನ ಸ್ವರೂಪದಲ್ಲಿ ನೆಲೆಸಿದ ತ್ರಿಗುಣಾತೀತ ಜ್ಞಾನಿಯು ಸುಖ-ದುಃಖವೆರಡನ್ನೂ ಸಾಕ್ಷಿಯಾಗಿ ಕಾಣಬಲ್ಲನು. ಗಂಗೆಯಲ್ಲಿ ಹೂವಿನ ಹಾರವೂ ತೇಲುತ್ತದೆ, ಶವವೂ ತೇಲುತ್ತದೆ. ನಾವು ದಡದ ಮೇಲೆ ನಿಂತು ಎರಡನ್ನೂ ನಿಷ್ಪಕ್ಷಪಾತವಾಗಿ ನೋಡುತ್ತೇವೆ. ಅಂತೆಯೇ ಜ್ಞಾನಿಯೂ ಶರೀರವನ್ನು ತನ್ನಿಂದ ಪ್ರತ್ಯೇಕವಾಗಿ ನೋಡುತ್ತಾನೆ. ಶರೀರದ ಸುಖ-ದುಃಖಗಳನ್ನು ತನ್ನಿಂದ ಬೇರೆಯಾಗಿ ನೋಡು ತ್ತಾನೆ. ನೋವಿಗೆ, ದುಃಖಕ್ಕೆ ಕಾರಣಗಳು ಸಾವಿರ. ಮೂರ್ಖ ಮಾತ್ರ ಅವುಗಳಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಾನೆ, ಜ್ಞಾನಿಯಲ್ಲ.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶತಿ ನ ಪಂಡಿತಮ್ ॥

(ಮಹಾಭಾರತ, ಅರಣ್ಯಪರ್ವ, ೨.೧೭)

ಜೈನ ಧರ್ಮದ ಪ್ರಕಾರ ಮನುಷ್ಯನ ಸುಖ-ದುಃಖಕ್ಕೆ ಅವನ ಶುಭ ಅಥವಾ ಅಶುಭ ಕರ್ಮಗಳು ಕಾರಣ. ಪೂರ್ವಕೃತ ದುಷ್ಕರ್ಮಗಳಿಂದಲೇ ಎಂದರೆ ಪಾಪದಿಂದಲೇ ನಮಗೆ ದುಃಖ ಬರುವುದು. ಆದ್ದರಿಂದ ದುಃಖದಿಂದ ಪಾರಾಗಲು ಉಪಾಯ ಹೊಸ ದುಷ್ಕರ್ಮಗಳನ್ನು ಮಾಡದಿರುವಿಕೆ ಮತ್ತು ಪೂರ್ವ ಕರ್ಮಫಲಗಳಿಂದ ಪಾರಾಗಲು ತಪಸ್ಸನ್ನು ಮಾಡುವುದು. ಕರ್ಮ ಸಂಚಯವನ್ನು ನಿಲ್ಲಿಸಬೇಕು. ಅದನ್ನು ಸಂವರ ಎಂದು ಕರೆಯಲಾಗಿದೆ. ತಪಸ್ಸಿನಿಂದ ಅಶುಭ ಕರ್ಮಗಳನ್ನು ನಾಶ ಮಾಡುವುದನ್ನು ನಿರ್ಜರಾ ಎಂದು ಕರೆಯಲಾಗಿದೆ.

ತಪಸ್ಸು ಎಂದರೆ ಸ್ವಇಚ್ಛೆಯಿಂದ ಕಷ್ಟವನ್ನು ಸಹಿಸುವುದು. ಮನಸ್ಸಿಲ್ಲದೆ ಕಷ್ಟಗಳನ್ನು ಸಹಿಸುವುದು ದುಃಖವನ್ನುಂಟುಮಾಡುತ್ತದೆ. ಆದರೆ ನಾವು ಸ್ವೇಚ್ಛೆಯಿಂದ ಕಷ್ಟಗಳನ್ನು ಸಹಿಸಿದಾಗ ಅದು ಮುಕ್ತಿಗೆ ಕಾರಣವಾಗುತ್ತದೆ. ನಮ್ಮ ಸುಖ-ದುಃಖಗಳಿಗೆ ಬೇರೆ ಯಾರೂ ಕಾರಣರಲ್ಲ. ಅದಕ್ಕೆ ನಾವುಗಳೇ ಜವಾಬ್ದಾರರು.

ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ
ಪರೋ ದದಾತೀತಿ ಕುಬುದ್ಧಿರೇಷಾ ।
ಅಹಂ ಕರೋಮೀತಿ ವೃಥಾಭಿಮಾನಃ
ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ ॥

ಅಧ್ಯಾತ್ಮ ರಾಮಾಯಣ, ಅಯೋಧ್ಯಾಕಾಂಡ , ೬.೬

ಮಹಾಪುರುಷರು ತೋರಿದ ಆದರ್ಶ

ಮಹಾಪುರುಷರು ಅದರಲ್ಲೂ ಅವತಾರಗಳು ತಮ್ಮ ಜೀವನದಲ್ಲಿ ಜನಸಾಮಾನ್ಯರಿಗೆ ದುಃಖಗಳನ್ನೆದುರಿಸುವ ಬಗೆಯನ್ನು ತೋರಿಸಿಕೊಡಲು ಅನೇಕ ಕಷ್ಟದುಃಖಗಳನ್ನು ಸಹಿಸಿದ್ದಾರೆ. ಅಷ್ಟೇ ಅಲ್ಲ, ಅವತಾರಗಳು ನಮ್ಮ ಪಾಲಿನ ಕಷ್ಟಗಳನ್ನು ತಾವು ಸಹಿಸಿ, ನಮ್ಮ ಭಾರವನ್ನು ಕಡಿಮೆ ಮಾಡುತ್ತಾರೆ. ದುರ್ಬಲ ಮಾನವರ ಕಷ್ಟದುಃಖಗಳನ್ನು ತಾವೇ ಅನುಭವಿಸುವಲ್ಲಿ ಅವರಿಗೆ ಅಸಾಧಾರಣ ಸಾಮರ್ಥ್ಯವಿದೆ. ಏಸುಕ್ರಿಸ್ತನ ಉದಾಹರಣೆಯನ್ನು ನಾವು ಅದಾಗಲೇ ನೋಡಿದ್ದೇವೆ. ಕ್ರಿಸ್ತನು ಸಹಿಸಿದ ಆ ದುಃಖಗಳು ಮಾನವತೆಗೆ ಕಷ್ಟಸಹಿಷ್ಣುತೆಯ ಆದರ್ಶವನ್ನು ತೋರಿಸಲೆಂದಷ್ಟೇ ಅಲ್ಲ, ಆ ಮೂಲಕ ಅವನು ಮಾನವತೆಯ ಕಷ್ಟಗಳನ್ನು ತಾನು ಅನುಭವಿಸಿ ಅವರ ಪಾಪಭಾರವನ್ನು ಕಡಿಮೆ ಮಾಡಿರುವನು. ಬುದ್ಧ ಕಠೋರ ತಪಸ್ಸಿನಿಂದ ನಿರ್ವಾಣ ಪದವನ್ನು ಪಡೆದು ಜಗತ್ತಿಗೆ ದುಃಖನಿವೃತ್ತಿಯ ಸರ್ವಜನಸುಲಭ ಉಪಾಯವನ್ನು ತೋರಿಸಿಕೊಟ್ಟನು.

ಶ್ರೀರಾಮನ ಜೀವನವು ದುಃಖ ಮತ್ತು ವಿಷಮ ಸಾಮಾಜಿಕ ಸಮಸ್ಯೆಗಳಿಗೆ ಉತ್ತರವನ್ನು ನೀಡುವ ಒಂದು ಸುಂದರ ಚರಿತ್ರೆಯಾಗಿದೆ. ಮಾನವನ ಮೂರು ಅನಿವಾರ್ಯ ಸಮಸ್ಯೆಗಳು — ಅಸಹಾಯಕತೆ, ಕೊರತೆ ಮತ್ತು ಅನಿಶ್ಚಿತತೆ — ಅಯೋಧ್ಯೆಯ ಇತಿಹಾಸದಲ್ಲೇ ಸ್ಪಷ್ಟವಾಗಿ ಎದುರಾಗಿದ್ದವು. ಮಹಾರಾಜ ದಶರಥನು ಜ್ಯೋತಿಷಿಗಳೊಂದಿಗೆ ಪರ್ಯಾಲೋಚಿಸಿ ಮರುದಿನ ಪ್ರಾತಃಕಾಲ ಶ್ರೀರಾಮನ ಪಟ್ಟಾಭಿಷೇಕವೆಂದು ತೀರ್ಮಾನಿಸಿ

ದ್ದನು. ಆದರೆ ಮರುದಿನ ಬೆಳಗ್ಗೆ ರಾಮ ವನವಾಸಕ್ಕೆ ಹೋಗ ಬೇಕಾಯಿತು. ಜೀವನದ ಅನಿಶ್ಚಿತತೆಗೆ ಇದಕ್ಕಿಂತ ದೊಡ್ಡ ಉದಾ ಹರಣೆ ಎಲ್ಲಿ ಸಿಗಲು ಸಾಧ್ಯ? ಕೈಕೇಯಿ ಮುಂದಿಟ್ಟ ಎರಡು ವರ ಗಳನ್ನು ನೀಡುವಲ್ಲಿ ಮತ್ತು ತನ್ಮೂಲಕ ನಿರ್ಮಾಣಗೊಂಡ ವಿಷಮ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ರಾಜ ದಶರಥನ ಅಸಹಾಯ ಕತೆಯು ಮಾನವ ಜೀವನದ ಅನಿವಾರ್ಯ ಮುಖವೇ ಆಗಿದೆ.

ರಾಮಾಯಣದ ಬೇರೆ ಬೇರೆ ಪಾತ್ರಗಳು ಈ ಸಮಸ್ಯೆಯನ್ನು ಎದುರಿಸಿದ ಬಗೆ ನಮಗೆ ಆದರ್ಶ. ರಾಮನು ಸ್ವಇಚ್ಛೆಯಿಂದ ಕಾಡಿಗೆ ಹೋಗಲು ಒಪ್ಪುತ್ತಾನೆ. ರಾಜಸಿಂಹಾಸನವನ್ನು ತನ್ನ ಪ್ರೀತಿಯ ತಮ್ಮ ಭರತನಿಗೆ ಕೊಡಲು ಅವನಿಗೆ ಪೂರ್ಣ ಸಮ್ಮತಿ ಯಿದೆ. ಇನ್ನೊಂದೆಡೆ ಭರತನು ರಾಮನ ಪ್ರತಿನಿಧಿಯಾಗಿ ರಾಜ್ಯ ಭಾರವನ್ನು ಮಾಡುತ್ತಾನೆಯೇ ಹೊರತು ರಾಜ್ಯಪದವಿಯನ್ನು ಸ್ವೀಕರಿಸುವುದಲ್ಲ. ಹೀಗೆ ತ್ಯಾಗ ಮತ್ತು ಪ್ರೇಮದಿಂದಲೇ ಸಮ ಸ್ಯೆಗೆ ಪರಿಹಾರವನ್ನು ಕಂಡುಕೊಂಡರು. ಸೀತೆ ಮತ್ತು ಲಕ್ಷ್ಮಣರೂ ಅದಕ್ಕೆ ತಕ್ಕಂತೆಯೇ ಇದ್ದರು. ಕೌಸಲ್ಯೆ, ಮತ್ತು ಸುಮಿತ್ರೆಯರು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ತ್ಯಾಗಮಾಡು ತ್ತಾರೆ. ಪ್ರತಿಯೊಬ್ಬರೂ ತ್ಯಾಗ, ಪ್ರೇಮ ಮತ್ತು ಉನ್ನತ ನೈತಿಕ ಆದರ್ಶದ ನೆರವಿನಿಂದಲೇ ದುಃಖವನ್ನು ಪರಾಭವಗೊಳಿಸಿದರು.

ಸ್ವಾಮಿ ವಿವೇಕಾನಂದರ ಇಡೀ ಜೀವನ ಬಹಳ ಕಷ್ಟಕರ ವಾಗಿತ್ತು. ದುಃಖನಿವೃತ್ತಿಗೆ ಅವರ ಮಾರ್ಗದರ್ಶನವೇನು? ಅವರು ಹೇಳುತ್ತಾರೆ, ಸುಖ-ದುಃಖ ಎರಡೂ ಸತ್ಯ. ಸುಖವು ದುಃಖದ ಕಿರೀಟವನ್ನು ಧರಿಸಿಕೊಂಡು ಮನುಷ್ಯನ ಬಳಿಬರುತ್ತದೆ. ಅವೆರೆಡರಲ್ಲೂ ಭಗವಂತನನ್ನು ನೋಡಲೆತ್ನಿಸಬೇಕು. '' Learn to recognise mother as instinctively in evils as in good." ಒಳಿತಿನಲ್ಲಿ ತಾಯಿಯನ್ನು ನೋಡುವಂತೆ ಕೆಡುಕಿ ನಲ್ಲೂ ತಾಯಿಯನ್ನು ನೋಡಿ. ಇದಾಗಿ ದುಃಖಗಳು ನಮ್ಮ ಪಾಲಿನ ಶಿಕ್ಷಕರು. ಸುಖಕ್ಕಿಂತ ದುಃಖವೇ ನಮಗೆ ಹೆಚ್ಚಿನ ಪಾಠ ವನ್ನು ಕಲಿಸುತ್ತದೆ. ಸಂಸಾರವೆಂಬ ಸಿಂಹಸ್ವಪ್ನವನ್ನು ಭೇದಿಸುವಲ್ಲಿ ದುಃಖ ದೊಡ್ಡ ಸಹಾಯವನ್ನು ಮಾಡುತ್ತದೆ. ನಾವು ಇನ್ನೊಬ್ಬರ ದುಃಖವನ್ನು ಅರ್ಥಮಾಡಿಕೊಂಡು ಪರಿಹರಿಸಲೆತ್ನಿಸಬೇಕು. ಅವರು ತಮ್ಮ 'Kali The Mother' ಎಂಬ ಕವನದಲ್ಲಿ ದುಃಖ ವನ್ನು ಸಪ್ರೇಮದಿಂದ ಸ್ವೀಕರಿಸುವಂತೆ ಕರೆ ನೀಡಿದ್ದಾರೆ.

ಬಡವರ, ದುಃಖಿಗಳ ಸಂತ್ರಸ್ತರ ಸೇವೆಯನ್ನು ಮಾಡಲು ನಾನು ಅನೇಕ ಜನ್ಮಗಳೆತ್ತಿ ಬಂದು, ಅಸಂಖ್ಯ ಕಷ್ಟಗಳನ್ನು ಸಹಿಸು ವಂತಾಗಲಿ ಎಂದು ಸ್ವಾಮೀಜಿ ಬಯಸಿದ್ದರು.

ಶ್ರೀರಾಮಕೃಷ್ಣರು ತಮ್ಮ ಪರಮ ಕಷ್ಟ ಸಹಿಷ್ಣು ಜೀವನದಿಂದ ದುಃಖನಿವೃತ್ತಿಯ ಉಪಾಯವನ್ನು ತೋರಿಸಿಕೊಟ್ಟಿದ್ದಾರೆ. ಶ್ರೀರಾಮಕೃಷ್ಣರು ಭಕ್ತರ ಅದರಲ್ಲೂ ಗಿರೀಶಚಂದ್ರ ಘೋಷನ ಪಾಪಗಳನ್ನು ಸ್ವೀಕರಿಸಿದ್ದರಿಂದಲೇ ಅವರಿಗೆ ಗಂಟಲಿನ ಕ್ಯಾನ್ಸರ್ ಬರುವಂತಾಯಿತು, ಎಂಬುದು ಭಕ್ತರ ನಂಬಿಕೆ. ಈ ಅಂತಿಮ ಕಾಯಿಲೆ, ಅತ್ಯಂತ ಕಷ್ಟಕರ ಕಾಯಿಲೆಯ ನಡುವೆಯೂ ಅವರು ಸದಾ ಆನಂದಮೂರ್ತಿಯಾಗಿದ್ದರು. ಸ್ವಾಮಿ ತುರೀಯಾನಂದ ರಂತಹ ಕೆಲವು ಭಕ್ತರಿಗೆ ಶ್ರೀರಾಮಕೃಷ್ಣರು ಕ್ಯಾನ್ಸರಿನ ನೋವಿ ನಿಂದ ಪೂರ್ಣವಾಗಿ ಬೇರೆಯಾಗಿದ್ದಾರೆ, ಅವರು ಸದಾ ತಮ್ಮ ಆನಂದಮಯ ಸ್ವರೂಪದಲ್ಲಿ ಪ್ರತಿಷ್ಠಿತರಾಗಿದ್ದಾರೆ ಎಂದು ಸ್ಪಷ್ಟವಾಗಿ ಗೊತ್ತಿತ್ತು. ಶ್ರೀರಾಮಕೃಷ್ಣರೂ ಅದನ್ನು ಒಪ್ಪಿದ್ದರು.

ಒಂದು ಸಲ ಒಬ್ಬ ಗಾಯಕ ಶ್ರೀರಾಮಕೃಷ್ಣರೆದುರು, 'ಈ ಜಗತ್ತು ಮಾಯೆಯ ಮನೆ' ಎಂದು ಹಾಡುತ್ತಿದ್ದನು. ಶ್ರೀರಾಮ ಕೃಷ್ಣರು ಅವನನ್ನು ತಡೆದು ''ಈ ಜಗತ್ತು ಮೋಜಿನ ಮನೆ. ಇದರೊಳು ನಾ ತಿನ್ನುವೆ, ಕುಡಿಯುವೆ, ಕುಣಿಯುವೆ, ಹಾಡುವೆ'' ಎಂಬ ಹಾಡನ್ನು ಹಾಡಿದರು. ಭಗವಂತನನ್ನು ಹಿಡಿದುಕೊಂಡರೆ ಈ ದುಃಖಮಯ ಸಂಸಾರ ಆನಂದಪೂರ್ಣವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ಅವರು ತಮ್ಮ ಅಣ್ಣನ ಮಗ ಅಕ್ಷಯ ತೀರಿಕೊಂಡಾಗ ಬಹಳ ದುಃಖಿಸಿದರು. ಆದ್ದರಿಂದ ಪುತ್ರಮರಣದ ವೇದನೆಯನ್ನು ಬಲ್ಲವರಾಗಿದ್ದರು. ಅಂತಹವರಿಗೆಲ್ಲ ಸಾಂತ್ವನ ನೀಡಬಲ್ಲವರಾಗಿದ್ದರು.

ಉಪಸಂಹಾರ: ದುಃಖಗಳು, ಕಷ್ಟಗಳು ಮಾನವ ಜೀವನದ ಅನಿವಾರ್ಯ ಅಂಗಗಳು. ಅವುಗಳಿಂದ ಯಾರೂ ತಪ್ಪಿಸಿಕೊಳ್ಳ ಲಾಗದು. ಕೆಲವರಿಗೆ ಶಾರೀರಿಕ ಕಷ್ಟಗಳು ಹೆಚ್ಚು ಇರಬಹುದು. ಕೆಲವರಿಗೆ ಮಾನಸಿಕ ಕಷ್ಟಗಳು. ಮಾನವ ಸಮಾಜ ರಚನೆಯಲ್ಲೇ ಅಭಾವ, ಸ್ಪರ್ಧೆ, ಹೋರಾಟ ಸೇರಿಕೊಂಡಿವೆ. ಹೀಗಿರುವಾಗ ಮಹಾಪುರುಷರು ಮತ್ತು ಋಷಿಮುನಿಗಳು ಸಾರಿದ ವಿಭಿನ್ನ ಉಪಾಯಗಳ ನೆರವಿನಿಂದ ದುಃಖಮುಕ್ತರಾಗಲು ಪ್ರಯತ್ನಿಸ ಬೇಕು. ಶಾರೀರಿಕ ದುಃಖಗಳನ್ನು ತುಟಿಪಿಟಕ್ಕೆನ್ನದೆ ಧೈರ್ಯದಿಂದ ಸಹಿಸಬೇಕು. ಭಗವಂತನೇ ಆದೇಶಿಸಿದ್ದಾನೆ: *(ಗೀತೆ, ೨.೧೪)*

ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ।
ಆಗಮಾಽಪಾಯಿನೋಽನಿತ್ಯಾಃ ತಾನ್ ತಿತಿಕ್ಷಸ್ವ ಭಾರತ ॥

ಈ ಸುಖ ದುಃಖಗಳು ಶಾಶ್ವತವಲ್ಲ. ಅವು ಬರುತ್ತವೆ, ಹೋಗು ತ್ತವೆ. ಇನ್ನೊಂದು ಮುಖ್ಯ ವಿಚಾರ ಸಹಿಸುತ್ತ ಸಹಿಸುತ್ತ ಸಹನಶಕ್ತಿ ವೃದ್ಧಿಸುತ್ತದೆ, ದುಃಖಗಳು ಕ್ರಮೇಣ ಕ್ಷೀಣಿಸುತ್ತವೆ.

ದುಃಖಗಳಿಂದ ಪಾರಾಗಲು ಇನ್ನೊಂದು ಮುಖ್ಯ ಉಪಾಯ ದುಃಖದ ಕಾರಣಗಳನ್ನು ನಿವಾರಿಸಿಕೊಳ್ಳಬೇಕು. ದುಃಖಗಳ ಮೂಲ ಕಾರಣ ನಮ್ಮ ಆಸೆ-ಆಕಾಂಕ್ಷೆಗಳು, ಅತೃಪ್ತ ವಾಸನೆಗಳು, ಆಸಕ್ತಿ ಗಳು ಎಂಬ ವಿಷಯದಲ್ಲಿ ಎಲ್ಲರ ಸಹಮತಿಯಿದೆ. ಆದ್ದರಿಂದ ಅವನ್ನು ಬಿಡಬೇಕು. ಗೀತೆ ಹೇಳುವಂತೆ, ತಮೋಗುಣದ ಫಲ ಅಜ್ಞಾನ, ರಜೋಗುಣದ ಫಲ ದುಃಖ, ಸತ್ವಗುಣದ ಫಲ ಸುಖ.

ಕರ್ಮಣಃ ಸುಕೃತಸ್ಯಾಹುಃ ಸಾತ್ವಿಕಂ ನಿರ್ಮಲಂ ಫಲಂ।
ರಜಸಸ್ತು ಫಲಂ ದುಃಖಮ್ ಅಜ್ಞಾನಂ ತಮಸಃ ಫಲಂ ॥

(ಗೀತೆ, ೧೪.೧೬)

ಸತ್ವಗುಣ ಮತ್ತು ಚಿತ್ತಶುದ್ಧಿಯಿಂದ ವ್ಯಕ್ತಿ ದುಃಖದಿಂದ ಪಾರಾಗಬಹುದು. ಅದನ್ನು ನಿಷ್ಕಾಮ ಕರ್ಮಯೋಗ, ಪತಂಜಲಿ ಹೇಳಿದ ಅಷ್ಟಾಂಗಯೋಗ ಮಾರ್ಗ, ಭಕ್ತಿಯೋಗ, ಅಥವಾ ಇನ್ನಾವುದೇ ಉಪಾಯದಿಂದ ಸಾಧಿಸಬಹುದು. ಕೊನೆಗೂ ಪೂರ್ಣ ದುಃಖನಿವೃತ್ತಿಯು ಅದ್ವೈತಜ್ಞಾನದಿಂದ ಮಾತ್ರ . ಜ್ಞಾನ ವೊಂದೇ ಎಲ್ಲ ಕಲ್ಮಶಗಳನ್ನು ಮತ್ತು ಅದರಿಂದ ಹುಟ್ಟುವ ದುಃಖ ಗಳನ್ನು ಪೂರ್ಣವಾಗಿ ಸುಟ್ಟುಹಾಕುತ್ತದೆ.

ಸಮಾಜದಲ್ಲಿ ಕಾಣುವ ವಿಷಮತೆ, ಅಸಮಾನತೆ, ಶೋಷಣೆ ಇತ್ಯಾದಿ ಮತ್ತು ಅವುಗಳಿಂದ ಹುಟ್ಟುವಂತಹ ಯಾವ ಯಾವ ಸಮಸ್ಯೆಗಳಿವೆಯೋ, ಅವನ್ನು ವ್ಯವಹಾರಜ್ಞಾನದಿಂದ ದೂರ ಮಾಡುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ವ್ಯಕ್ತಿ ತನ್ನ ದುಃಖ ಗಳನ್ನು ದೊಡ್ಡದಾಗಿಸಿಕೊಳ್ಳದೆ ಇನ್ನೊಬ್ಬರ ದುಃಖಗಳನ್ನು ನಿವಾ ರಿಸಲು ಪ್ರಯತ್ನಿಸಬೇಕು. ನಮ್ಮ ದುಃಖಗಳಿಗೆ ಒಂದು ಮುಖ್ಯ ಕಾರಣ ನಾವು ನಮ್ಮ ದುಃಖಗಳಿಗೆ ಬಹಳ ಪ್ರಾಮುಖ್ಯತೆ ಕೊಡು ತ್ತೇವೆ. ಇನ್ನೊಬ್ಬರ ದುಃಖಗಳನ್ನು ನಾವು ಅಲ್ಪವಾಗಿ ಭಾವಿಸು ತ್ತೇವೆ. ಆದರೆ ನಿಜವಾಗಿ ಆಲೋಚಿಸಿದರೆ ಜಗತ್ತಿನಲ್ಲಿ ನಮಗಿಂತ ಹೆಚ್ಚು ದುಃಖಿಗಳು ಬಹಳ ಜನ ಇದ್ದಾರೆ. ಆದ್ದರಿಂದ ತನ್ನ ದುಃಖ ಗಳಿಗಾಗಿ ಶೋಕಿಸುವ ಬದಲು ಇತರರ ದುಃಖಗಳನ್ನು ಪರಿಹರಿಸ ಲೆತ್ನಿಸುವುದು ಮನುಷ್ಯ ಕರ್ತವ್ಯ . ಮಹಾಪುರುಷರು ಇದನ್ನು ತಮ್ಮ ಜೀವನದಿಂದ ತೋರಿಸಿಕೊಟ್ಟಿದ್ದಾರೆ. ಈ ಕುರಿತು ಎರಡು ಪ್ರಸಿದ್ಧ ಶ್ಲೋಕಗಳಿವೆ :

ನ ತ್ವಹಂ ಕಾಮಯೇ ರಾಜ್ಯಂ ನ ಸುಖಂ ನಾಪುನರ್ಭವಮ್ ।
ಕಾಮಯೇ ದುಃಖತಪ್ತಾನಾಂ ಪ್ರಾಣಿನಾಮಾರ್ತಿನಾಶನಮ್॥

'ನಾನು ರಾಜ್ಯವನ್ನು ಬಯಸುವುದಿಲ್ಲ, ಸುಖವನ್ನು ಬಯ ಸುವುದಿಲ್ಲ. ಮೋಕ್ಷಕಾಮನೆಯೂ ನನಗಿಲ್ಲ. ನಾನು ದುಃಖತಪ್ತ ಜೀವಿಗಳ ಕಷ್ಟಪರಿಹಾರವೊಂದನ್ನೇ ಬಯಸುತ್ತೇನೆ.'

ಕೋ ನೂನ ಉಪಾಯೋ ಸ್ಯಾದ್ಯೇನಾಹಂ ಸರ್ವದೇಹಿನಾಮ್ ।
ಅಂತಃಪ್ರವಿಶ್ಯ ಸತತಂ ಭವೇಯಂ ದುಃಖಭಾರಭಾಕ್ ॥

ಎಂದರೆ, ಯಾವ ಉಪಾಯದಿಂದ ನಾನು ಎಲ್ಲ ಜೀವರಾಶಿ ಗಳ ಒಳಹೊಕ್ಕು ಅವರ ದುಃಖದ ಭಾರವನ್ನು ನಾನು ಹೊರು ವಂತಾಗುತ್ತದೆ?

ರಾಮಕೃಷ್ಣ ತಪೋವನ

(ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಳ
ಇದರ ಮಾರ್ಗದರ್ಶನದಲ್ಲಿ ನಡೆಯುವ **ಕರ್ನಾಟಕ ರಾಮಕೃಷ್ಣ-ವಿವೇಕಾನಂದ**
ಭಾವ ಪ್ರಚಾರ ಪರಿಷತ್ ಇದರ ಸದಸ್ಯತ್ವ ಹೊಂದಿದ ಸಂಸ್ಥೆ)

E-mail : ramakrishnatapovan@gmail.com, website : www.ramakrishnatapovan.org

ರಾಮಕೃಷ್ಣ ತಪೋವನ ಬಾಲಕಾಶ್ರಮ, ಪೊಳಲಿಯಲ್ಲಿ ಉಚಿತ ವಸತಿ ಸೌಲಭ್ಯ

ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ನಾನಾ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದ ಗ್ರಾಮೀಣ ಪ್ರತಿಭಾವಂತ ಹುಡುಗರಿಗೆ ಶಿಕ್ಷಣಕ್ಕೆ ನೆರವಾಗುವ ಅನ್ವಯ **ರಾಮಕೃಷ್ಣ ತಪೋವನ ಬಾಲಕಾಶ್ರಮ**ವು ಅರ್ಜಿ ಆಹ್ವಾನಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ ಸೇರಬಹುದು. ಉಚಿತ ಶಿಕ್ಷಣ, ಊಟ ಮತ್ತು ವಸತಿ ಒದಗಿಸಲಾಗುವುದು. ಜೊತೆಗೆ ಭಜನೆ, ಸಂಗೀತ, ಯಕ್ಷಗಾನ, ತೋಟಗಾರಿಕೆ, ಕಂಪ್ಯೂಟರ್, ಯೋಗ, ಶ್ರಮಸೇವೆ, ಭರತನಾಟ್ಯ, ಕರಾಟೆ ಇತ್ಯಾದಿ ತರಬೇತಿ ನೀಡಲಾಗುತ್ತದೆ. ಸುಂದರ ಹಳ್ಳಿಯ ಪರಿಸರದಲ್ಲಿ ಈ ಬಾಲಕಾಶ್ರಮವಿದ್ದು, ಆಸಕ್ತಿಯಿದ್ದ ಹುಡುಗರು 7ನೇ ತರಗತಿಯ ಪರೀಕ್ಷೆ ಮುಗಿದ ಕೂಡಲೇ ವೈಯಕ್ತಿಕ ವಿವರಗಳೊಂದಿಗೆ ದೂರವಾಣಿ ಇಲ್ಲವೆ ಅಂಚೆಯ ಮೂಲಕ ಸಂಪರ್ಕಿಸ ಬಹುದು. ಬಾಲಕಾಶ್ರಮದ ಪರಿಚಯ-ಮಾಹಿತಿಗಾಗಿ ವಿದ್ಯಾರ್ಥಿಗಳು ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳ ಬೇಕಾಗುತ್ತದೆ. ಮಕ್ಕಳ ಮೇಲ್ವಿಚಾರಣೆಯನ್ನು ಸ್ವತಃ ಸ್ವಾಮೀಜಿಯವರೇ ವಹಿಸಿಕೊಳ್ಳುವರು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು :

ರಾಮಕೃಷ್ಣ ತಪೋವನ, ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ,
ಕರಿಯಂಗಳ ಗ್ರಾಮ, ಪೊಳಲಿ ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ 574 219
ದೂರವಾಣಿ ಸಂಖ್ಯೆ : 9845165108, 9481846545, 0824-2016455, 2266655